**CC 2526/2019**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್  2526/2019**

**ಪಿ ಡಬ್ಲೂ - 1**

**ಸಾಕ್ಷಿಯ ಹೆಸರು -** **ಮಲಿಕಾ ಬೇಗಂ**
**ಗಂಡನ ಹೆಸರು -** **ಎಂ ಎ ವಲಿಸಾಬ**
**ವಯಸ್ಸು -** **52 ವರ್ಷಗಳು**
**ಉದ್ಯೋಗ -** **ಗೃಹಿಣಿ**
**ವಾಸಸ್ಥಳ -** **ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ 25-06-2024 ರಂದು ಪ್ರಾಮಾಣೀಕರಿಸಲಾಯಿತು.**

**ಸಾಕ್ಷಿ ಹಿಂದಿ ಭಾಷೆ ಬಲ್ಲವರಾಗಿದ್ದು, ಸದರಿಯವರ ಸಾಕ್ಷ್ಯವನ್ನು ಕನ್ನಡಕ್ಕೆ ಅನುವಾದಿಸಲು ಶ್ರೀ ಬಿ ಎ ಪಿ ವಕೀಲರನ್ನು ನೇಮಿಸಲಾಯಿತು. ಸದರಿ ವಕೀಲರಿಗೆ ರೂ. 300/- ಶುಲ್ಕ ವನ್ನು ಕೊಡುವಂತೆ ಫಿರ್ಯದುದಾರರಿಗೆ ಆದೇಶಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಹೆಚ್ ಆರ್ ವಕೀಲರಿಂದ**

ಈ ಪ್ರಕರಣವನ್ನು ನಾನು ಇಪ್ತಿಕಾರ್ ರವರ ವಿರುದ್ಧ ದಾಖಲಿಸಿರುತ್ತೇನೆ. ಇಪ್ತಿಕಾರ್ ರವರನ್ನು ನೋಡಿದರೆ ಗುರುತಿಸುತ್ತೇನೆ. ಸದರಿಯವರು ಈ ದಿನ ಗೈರು ಹಾಜರು ಇದ್ದು ಗುರುತಿಸುವಿಕೆಗೆ ತಕರಾರುಗಳು ಇರುವುದಿಲ್ಲ. ದಿಃ **10-11-2006** ರಂದು ಆರೋಪಿ ನನ್ನ ಮನೆಗೆ ಬಂದಿದ್ದರು. ಆರೋಪಿಯು ಹೊಸಪೇಟೆಯ ಅನಂತಶಯನಗುಡಿ ಪ್ರದೇಶದಲ್ಲಿ ತನಗೆ ಸೇರಿದ ಗುಡಿಸಲು ಇದ್ದ ಒಂದು ಜಾಗ ಇರುತ್ತದೆ ಎಂದು ತಿಳಿಸಿದ್ದ. ಸದರಿ ಆಸ್ತಿಯ ಸರ್ವೆ ನಂ. **115/3,** ಅಸೆಸಮೆಂಟ್ ನಂ. **98** ರಲ್ಲಿ ಇರುತ್ತದೆ ಎಂದು ತಿಳಿಸಿದ್ದ. ಸದರಿ ಆಸ್ತಿಯು ಪೂ-ಪಃ **21** ಅಡಿ, ಉ-ದಃ **35** ಅಡಿ ಇರುತ್ತದೆ ಎಂದು ತಿಳಿಸಿದ್ದ.

ಸದರಿ ಸ್ವತ್ತಿನ ಪೂರ್ವಕ್ಕೆ ರಸ್ತೆ ಇದೆ. ಉತ್ತರಕ್ಕೆ ರಸ್ತೆ, ಪಶ್ಚಿಮಕ್ಕೆ ಗುರುಪಾದಪ್ಪನ ಹೋಟೆಲ್, ದಕ್ಷಿಣಕ್ಕೆ ಹುಡಾ ನಿವೇಶನಗಳು ಈ ರೀತಿ ಚೆಕ್ ಬಂದಿ ಇರುತ್ತದೆ ಎಂದು ತಿಳಿಸಿದ್ದರು. ಸದರಿ ಸ್ವತ್ತಿಗೆ ತಾನೇ ಸಂಪೂರ್ಣ ಮಾಲೀಕಯಿದ್ದು ಯಾವುದೇ ತಕರಾರು ಅಥವಾ ವ್ಯಾಜ್ಯ ಇರುವುದಿಲ್ಲ ಮತ್ತು ದಾಖಲೆಗಳು ತನ್ನ ಹೆಸರಿನಲ್ಲಿ ಇವೆ ಎಂದು ತಿಳಿಸಿದ್ದ. ಸದರಿ ನಿವೇಶನವನ್ನು ಮಾರಾಟ ಮಾಡುತ್ತಿದ್ದೇನೆ ಎಂದು ನನಗೆ ತಿಳಿಸಿದ. ದಿಃ **14-11-2006** ರಂದು ರೂ. **56,000/-** ಗಳನ್ನು ಕೊಟ್ಟು ನನ್ನ ಹೆಸರಿಗೆ ನೋಂದಾಯಿತ ಕ್ರಯ ಪತ್ರವನ್ನು ಮಾಡಿಸಿಕೊಂಡಿದ್ದೆ. ಸದರಿ ಸ್ವತ್ತನ್ನು ಖರೀದಿಸಿದ ನಂತರ ಅದರಲ್ಲಿ ರೂ. **5,00,000/-** ಗಳಷ್ಟು ಖರ್ಚು ಮಾಡಿ **2** ಭಾಗಗಳಿರುವ ಮನೆಯನ್ನು ಕಟ್ಟಿದ್ದೆ.

**2012** ರಲ್ಲಿ ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದವರು ನನಗೆ ಸದರಿ ಆಸ್ತಿಯಲ್ಲಿ ಉತ್ತರ ಭಾಗದಲ್ಲಿ ಅತಿಕ್ರಮಣ ಮಾಡಿರುತ್ತೇನೆ ಎಂದು ನೋಟಿಸ್ ನೀಡಿರುತ್ತಾರೆ. ನಾನು ಸದರಿ ನೋಟಿಸ್ ಗೆ ಉತ್ತರ ನೀಡಿದ್ದೆ. ನಾನು ಯಾವುದೇ ಅತಿಕ್ರಮಣ ಮಾಡಿಲ್ಲ ಮತ್ತು ನನ್ನ ಸ್ವತ್ತಿನಲ್ಲಿಯೇ ಮನೆ ಕಟ್ಟಿರುತ್ತೇನೆ ಎಂದು ಉತ್ತರ ನೀಡಿದ್ದೆ. **2013** ರಲ್ಲಿ ಸದರಿ ಪ್ರಾಧಿಕಾರದವರು ಪುನಃ ನನಗೆ ನೋಟಿಸ್ ನೀಡಿದ್ದರು. ಸದರಿ ನೋಟಿಸ್ ಗೆ ನಾನು ಉತ್ತರ ನೀಡಿರುತ್ತೇನೆ. ನಂತರದಲ್ಲಿ ಸದರಿ ಪ್ರಾಧಿಕಾರದವರು ಕ್ರೇನ್ ತೆಗೆದುಕೊಂಡು ಮನೆಯನ್ನು ಕೆಡವಲು ಬಂದಿದ್ದರು.

ನಾನು ಸಿವಿಲ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಪ್ರಾಧಿಕಾರದ ವಿರುದ್ಧ ತಡೆಯಾಜ್ಞೆ ಪಡೆದಿದ್ದೆ. ನಂತರದಲ್ಲಿ ನ್ಯಾಯಾಲಯದಿಂದ ಸದರಿ ಆಸ್ತಿಯನ್ನು ಅಳತೆ ಮಾಡಲು ಆಯುಕ್ತರನ್ನು ನೇಮಕ ಮಾಡಲಾಗಿತ್ತು.

**ಪಿ ಡಬ್ಲ್ಯೂ - 1**

ಸದರಿ ಆಯುಕ್ತರ ವರದಿಯಲ್ಲಿ ಸಂಪೂರ್ಣ ಸ್ವತ್ತು ಪ್ರಾಧಿಕಾರಕ್ಕೆ ಸೇರಿದ್ದು ಎಂದು ನಮೂದಾಗಿದ್ದರಿಂದ, ಆ ದಾವೆಯಲ್ಲಿ ನನ್ನ ವಿರುದ್ಧ ತೀರ್ಪು ಬಂದಿತ್ತು. ನಾನು ಮೇಲ್ಮನವಿ ಸಲ್ಲಿಸಿದ್ದೆ. ಸದರಿ ಮೇಲ್ಮನವಿ ಸಹ ವಜಾ ಆಗಿತ್ತು. ನನಗೆ ಮೋಸ ಮಾಡುವ ಉದ್ದೇಶದಿಂದಲೇ ಆರೋಪಿ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಸದರಿ ನಿವೇಶನವನ್ನು ಮಾರಾಟ ಮಾಡಿದ್ದು ನನಗೆ ತಿಳಿದು ಬಂತು.

2017 ರಲ್ಲಿ ಆರೋಪಿಗೆ ನಾನು ನೋಟಿಸ್ ನ್ನು ಕಳುಹಿಸಿದ್ದೆ. ಆರೋಪಿಯು ನೋಟಿಸ್ ನ್ನು ತಿರಸ್ಕರಿಸಿದ್ದ. ನಂತರ ನಾನು ಪಟ್ಟಣ ಪೋಲಿಸ ಠಾಣೆಯಲ್ಲಿ ಆರೋಪಿ ವಿರುದ್ಧ ದೂರನ್ನು ನೀಡಿದ್ದೆ. ಪಟ್ಟಣ ಪೋಲಿಸ ಠಾಣೆಯವರು ನನ್ನ ದೂರು ದಾಖಲಿಸಿಕೊಂಡು, ನಂತರದಲ್ಲಿ ಬಿ ಅಂತಿಮ ವರದಿಯನ್ನು ಸಲ್ಲಿಸಿದ್ದರು. ನಂತರ ನಾನು ನ್ಯಾಯಾಲಯಕ್ಕೆ ಬಂದು ಆರೋಪಿಯ ವಿರುದ್ಧ ದೂರನ್ನು ಸಲ್ಲಿಸಿರುತ್ತೇನೆ.

ಆರೋಪಿ ಸದರಿ ಸ್ವತ್ತು ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ್ದು ಎಂದು ಗೊತ್ತಿದ್ದರೂ ಸಹ, ಗಡಿಬಿಡಿಯಲ್ಲಿ ನನಗೆ ಸದರಿ ಸ್ವತ್ತನ್ನು ಮೋಸ ಮಾಡುವ ಉದ್ದೇಶದಿಂದ ಮಾರಾಟ ಮಾಡಿರುತ್ತಾರೆ. ನಾನು ನನ್ನ ಪರವಾಗಿ ಈಗಾಗಲೇ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿ ನಿಪಿಃ 1 ರಿಂದ 6 ರ ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ.

**ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.